ಕೆಲಸ ಎಂಬುದು ಸ್ಪಷ್ಟವಾಗುತ್ತದೆ. ಕವಿತೆಗಳಲ್ಲಿ ಲಂಕೇಶ ತಮ್ಮದೇ ಆದ ಲಯವನ್ನು ಕೇಳಿಸುತ್ತಾರೆ. ಅವರ ಗದ್ಯ ಕಾವ್ಯದ ಸಂಗ್ರಹ ಗುಣವನ್ನು, ಚಿತ್ರಕ ಶಕ್ತಿಯನ್ನು ಪಡೆದು ಸಫಲವಾಗಿದೆ. ನಾಟಕಗಳಲ್ಲಿ ಸಾಮಾಜಿಕವಾಗಿ ಇನ್ನೂ ಹೆಚ್ಚು ಪ್ರಸ್ತುತರೆನಿಸುತ್ತಾರೆ. ಕವಿಯ ಮುಖ್ಯ ಆಸಕ್ತಿಗಳನ್ನು, ವೈಶಿಷ್ಟ್ಯಗಳನ್ನು ಒಳಗೊಳ್ಳುವಂತೆ ಅವರು ಸಂಪಾದಿಸಿಕೊಟ್ಟ 'ಅಕ್ಷರ ಹೊಸ ಕಾವ್ಯ'ಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಕಂಡದ್ದನ್ನು ಕಂಡಂತೆ ಹೇಳಿದರೂ ಅವರ ವಿಮರ್ಶೆ ಸ್ವೋಪಜ್ಞತೆಯಿಂದ ಚಿಂತನೆಗೆ ತೊಡಗಿಸುವಂಥದು:

'ಅನುಭವ ನಾನು ಪ್ರಯತ್ನಿಸದೇ ಬರಬಹುದು; ಬರೆಯುವುದು ಅಷ್ಟು ಸಲೀಸಲ್ಲ'.

'ನಮ್ಮ ಭಾವನೆಯನ್ನೆಲ್ಲ ಇಟ್ಟುಕೊಂಡು ವಿದ್ಯಾಭ್ಯಾಸದಿಂದ ಲಾಭ ಪಡೆಯೋದಕ್ಕೆ ವಿಚಿತ್ರ ರೀತಿಯ ಆತ್ಮನಿರೀಕ್ಷೆ, ಎಚ್ಚರ ಬೇಕಾಗುತ್ತದೆ. ಎರಡೂ ಸೇರಿದಾಗಲೇ ದೊಡ್ಡ ವ್ಯಕ್ತಿತ್ವ ಕಾವ್ಯ ಬರುತ್ತೆ'.

'ನನ್ನೆಲ್ಲ ಥ್ರಿಲ್‌ಗಳನ್ನು, ನೋವುಗಳನ್ನು, ಭ್ರಮೆಗಳನ್ನು ಬಿಟ್ಟ ಬರವಣಿಗೆ ಹೇಡಿತನದ್ದಾಗುತ್ತದೆ'.

'ಭಾಷೆಯೊಂದು ಮೌಲ್ಯವಾಗುವುದು ಅದು ಸತ್ಯಕ್ಕೆ ಹತ್ತಿರ ಹತ್ತಿರ ಹೋದಾಗ: ಸತ್ಯದಿಂದ ದೂರ ಹೋಗಿ ತೀರಾ ಸುಂದರವೂ ಪರಿಷ್ಕೃತವೂ ಆದಾಗ ಅಲ್ಲ'.

ಕೈಗೆ ಬಂದಂತೆ ಆರಿಸಿದ ಈ ಕೆಲವು ಮಾತುಗಳಿಂದ ಲಂಕೇಶರ ಸಾಹಿತ್ಯ ಮತ್ತು ಜೀವನ ದೃಷ್ಟಿಯನ್ನು, ಸ್ವತಂತ್ರ ವಿಚಾರ ಸರಣಿಯ ಮೌಲಿಕತೆಯನ್ನು ಅರಿಯಬಹುದು.

ಪತ್ರಿಕಾಕರ್ತರಾಗಿ ಬರಹಗಾರನ ಅಖಂಡವಾದ ಆತ್ಮವಿಶ್ವಾಸದಿಂದ ಲಂಕೇಶ ತಮ್ಮ ಪ್ರತಿಭೆಯ ಹೊಸ ಸಾಧ್ಯತೆಯನ್ನು ಪ್ರಭಾವಶಾಲಿಯಾಗಿ ತೋರಿಸುತ್ತಿದ್ದಾರೆ. ಸಿನಿಮಾ-ನಿರ್ದೇಶನದ ಗೀಳನ್ನು ಯಶಸ್ವಿಯಾಗಿ ನಿರ್ವಹಿಸಿದ ಮೇಲೆ ಅವರು ಪತ್ರಿಕಾರಂಗಕ್ಕೆ ಹೊರಳಿದ್ದು ಈ ಸಂದರ್ಭದಲ್ಲಿ ಒಂದು ಸುಯೋಗ. ಕನ್ನಡನಾಡಿನ ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಹೋರಾಟಕ್ಕೆ ರಾಜಕೀಯ ಆಯಾಮದಿಂದ ಸಮಗ್ರತೆ ತಂದುಕೊಡುವಲ್ಲಿ, ಪತ್ರಿಕೋದ್ಯಮದ ಭಾಷೆಗೆ ಜನತೆಯ ಭಾವನೆಯ ಜೀವಂತ ಸ್ಪಂದನವನ್ನು ತಾಗಿಸುವಲ್ಲಿ ಅವರದು ಒಂದು ವಿಶಿಷ್ಟ ಪ್ರಯೋಗವೆಂದೇ ಹೇಳಬಹುದು. ಪ್ರಾಮಾಣಿಕ ಮಾತು ಹಾಗೂ ಖಚಿತ ವರದಿಗಳಿಂದ ವಿಚಾರಶೀಲ ವ್ಯಕ್ತಿತ್ವವೊಂದು ನಿರ್ಮಾಣಗೊಳ್ಳುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ಪತ್ರಿಕೋದ್ಯಮ ಎಷ್ಟು ಸೂಕ್ಷ್ಮವಾದದ್ದೋ ಅಷ್ಟೇ ಭಂಡತನದ್ದು ಕೂಡ. ಲೇಖಕರಿಗೆ ಎಷ್ಟೇ ಸ್ವಾತಂತ್ರ್ಯ ಕೊಟ್ಟರೂ ಭಿನ್ನಾಭಿಪ್ರಾಯಗಳ ಮೂಲಕ ತಿಕ್ಕಾಟವುಂಟಾಗುವುದು ಸ್ವಾಭಾವಿಕವೇ. ಅಂಥ ಸಂದರ್ಭದಲ್ಲಿ ಸಂಪಾದಕ ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗುತ್ತದೆ. ಒಂದು ಗುರಿಯೆಡೆಗೆ ಬೇರೆ ಬೇರೆ ದಾರಿಗಳಿಂದ ಹೊರಟು ಹೊಂದಿಸಿಕೊಳ್ಳುತ್ತಿರುವ ಮನಸ್ಸುಗಳು ಮುರಿಯದಂತೆ, ಏಕಮುಖವಾದ ಶಿಲ್ಪಿಗಳು ದೂರದೂರ ಸಿಡಿದು ಹೋಗದಂತೆ ಅತ್ಯಂತ ಸಹನೆಯಿಂದ ಒಂದು ತಿಳಿವಳಿಕೆಗೆ ಬರಬೇಕಾಗುತ್ತದೆ. ಈ ಕಷ್ಟವನ್ನು ಲಂಕೇಶ ಈಗಾಗಲೇ ಅನುಭವಿಸಿರಬಹುದು. ಅದರಿಂದ ಪಾಠ ಕಲಿತಿರಬಹುದೆಂದು ಭಾವಿಸಿದ್ದೇನೆ.

ಈ ಪತ್ರಿಕೆಯ ಮೂಲಕವೇ ಅವರ ಖ್ಯಾತಿ ಹೆಚ್ಚಿದೆ ಎಂದುಕೊಂಡರೆ ಅದು ಮೂರ್ಖತನದ ಮಾತಾಗಿದೆ. ಹಾಗೆ ನೋಡಿದರೆ, ಪತ್ರಿಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕೂಡಲೆ ಮುಟ್ಟುವ ಹಾಗೂ ತಟ್ಟುವ ಮಾಧ್ಯಮವಾಗಿರುವುದರಿಂದ ಅವರ ಲೇಖನಿಯ ಹೊಣೆ ಇನ್ನೂ ಹೆಚ್ಚಿದೆ. ಅಲ್ಲದೆ ಕನ್ನಡದ ಒಬ್ಬ ಸಮಕಾಲೀನ ಶ್ರೇಷ್ಠ ಲೇಖಕರಾಗಿ ಅವರು ಈ ಮೊದಲೇ ಅದನ್ನು ಸಾಧಿಸಿದ್ದಾರೆ.

ಲಂಕೇಶ ಈಗ ಏನೇ ಆಗಿದ್ದರೂ ಅವರು ಮೂಲತಃ ಕವಿಯೆಂಬುದನ್ನು ಮರೆಯುವಂತಿಲ್ಲ. (ನೀಲೂ ಪದ್ಯಗಳು ಅವರ ಕಾವ್ಯ ಶಕ್ತಿಯನ್ನು ಇನ್ನೂ ಜೀವಂತವಾಗಿಟ್ಟಿವೆ). ಕವಿ ತಿಳಿದಿರಬೇಕಾದ ಒಂದು ಅಂಶವನ್ನು ಕುರಿತು ಅವರೇ ಬೇರೆಡೆ ಹೇಳಿರುವ ಒಂದು ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ: "(ಕವಿ) ಎಲ್ಲಕ್ಕಿಂತ ಮುಖ್ಯವಾಗಿ ಖ್ಯಾತಿಯ ತಂಗಾಳಿಯಲ್ಲಿ ಕೂಡ ಆಂತರ್ಯದ ಸೂಕ್ಷ್ಮ ಕುಡಿಯನ್ನು ಕಾಪಾಡಿಕೊಳ್ಳುತ್ತಾನೆ".

ಚೆನ್ನವೀರ ಕಣವಿ ಅವರ 'ಸಾಹಿತ್ಯ ಸಮಾಹಿತ' (ಪ್ರ: ಕನ್ನಡ ವಿಶ್ವ ವಿದ್ಯಾಲಯ, ಹಂಪಿ) ಕೃತಿಯಿಂದ ಆಯ್ದ ಬರಹ